ಕರ್ನಾಟಕ ಸರ್ಕಾರ

ಮೇ 30, 2016

## ಸುಪ್ರಸಿದ್ಧ ಸಾಹಿತಿ ಡಾ ದೇ ಜವರೇಗೌಡ ಅವರ ನಿಧನಕ್ಕೆ ಮುಖ್ಯಮಂತ್ರಿ ಶೋಕ

**ಬೆಂಗಳೂರು, ಮೇ 30 :**

ಸುಪ್ರಸಿದ್ಧ ಸಾಹಿತಿ, ಹೆಸರಾಂತ ಅನುವಾದಕ ಹಾಗೂ ಮೈಸೂರು ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿ ಡಾ ದೇ ಜವರೇಗೌಡ ಅವರ ನಿಧನಕ್ಕೆ ಮುಖ್ಯಮಂತ್ರಿ ಶ್ರೀ ಸಿದ್ದರಾಮಯ್ಯ ಅವರು ತೀವ್ರ ಶೋಕ ವ್ಯಕ್ತಪಡಿಸಿದ್ದಾರೆ.

ನಾಡೋಜ ಡಾ ದೇಜಗೌ ಅವರು ಈ ನಾಡಿನ ವಿಸ್ಮಯ ಶಕ್ತಿಯಾಗಿದ್ದರು. ನೂರರ ಹೊಸ್ತಿಲಲ್ಲೂ ಎಲ್ಲಾ ಸಂಪ್ರದಾಯ ಮತ್ತು ಅವೈಜ್ಞಾನಿಕ ಆಚರಣೆಗಳಿಗೆ ಸೆಡ್ಡು ಹೊಡೆದು ನಿತ್ಯ ನೂತನವಾದ ಜನಪರ ಆಲೋಚನೆಯ ವೈಚಾರಿಕ ಗತಿಸ್ಥಿತಿಯಲ್ಲಿ ತಮ್ಮ ವ್ಯಕ್ತಿತ್ವದ ಮೇಲ್ಮೆಯನ್ನು ನೆಲೆಗೊಳಿಸಿಕೊಂಡಿದ್ದರು.

ಜಾತಿಯ ಭೂತದಿಂದ ದೂರವಾಗಿದ್ದ ಡಾ ದೇಜಗೌ ಅವರು ಒಂದೆಡೆ ಸರಳ ವಿವಾಹಗಳಿಗೆ ಮತ್ತೊಂದೆಡೆ ಅಂತರ್ಜಾತಿಯ ವಿವಾಹಗಳಿಗೆ ಪ್ರೋತ್ಸಾಹ ನೀಡುತ್ತಿದ್ದದ್ದು ಅವರ ವಿಶಾಲ ಮನೋಭಾವ ಹಾಗೂ ದೂರದರ್ಶಿತ್ವ ದೃಷ್ಟಿಕೋನಕ್ಕೆ ಸಾಕ್ಷಿಯಾಗಿತ್ತು. ಮೈಸೂರು ವಿಶ್ವವಿದ್ಯಾಲಯದ ಕುಲಪತಿಯಾಗಿದ್ದ ಸಂದರ್ಭದಲ್ಲಿ ಮಾನಸ ಗಂಗೋತ್ರಿಯ ಆವರಣದಲ್ಲಿ ಗಿಡ-ಮರಗಳನ್ನು ಬೆಳೆಸಿ ಪರಿಸರ ಗಂಗೋತ್ರಿಯನ್ನಾಗಿ ರೂಪಿಸಿದ ಕೀರ್ತಿ ಡಾ ದೇಜಗೌ ಅವರದ್ದು.

ಕನ್ನಡ ಸಾರಸ್ವತ ಲೋಕಕ್ಕೆ ಡಾ ದೇಜಗೌ ಅವರ ಕೊಡುಗೆ ಅಪಾರ ಹಾಗೂ ಅನನ್ಯ. ಕನ್ನಡ ಭಾಷೆಗೆ ಶಾಸ್ತ್ರೀಯ ಸ್ಥಾನಮಾನ ದೊರಕಿಸಿಕೊಡುವಲ್ಲಿ ಅವರ ಅವಿರತ ಹೋರಾಟ ಸ್ಮರಣೀಯವಾದುದು. ಡಾ ದೇಜಗೌ ಅವರ ಬತ್ತಳಿಕೆಯಲ್ಲಿನ ಪ್ರಶಸ್ತಿ-ಪುರಸ್ಕಾರಗಳು ಲೆಕ್ಕವಿಲ್ಲದಷ್ಟು. ಡಾ ದೇಜಗೌ ಅವರ ನಿಧನದಿಂದ ಮಾನವೀಯ ಮೌಲ್ಯಗಳ ಪ್ರತಿಪಾದಿಸಿದ ಶ್ರೇಷ್ಠ ಸಾಹಿತಿ ಅಸ್ತಂಗತರಾದಂತಾಗಿದೆ ಎಂದು ಶ್ರೀ ಸಿದ್ದರಾಮಯ್ಯ ಅವರು ತಮ್ಮ ಸಂದೇಶದಲ್ಲಿ ಬಣ್ಣಿಸಿದ್ದಾರೆ.

************

ಡಿ ಪಿ ಎಂ